**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**

**ಸಿ.ಸಿ ನಂ. 220/2018**

**ಪ್ರಾಸಾ-02**

**ಚಾಸಾ- 02**

**ದಿನಾಂಕಃ 26-09-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

ಸಾಕ್ಷಿಯ ಹೆಸರು ಃ ಚಂದ್ರಶೇಖರ ತಃ ಬಾಲಪ್ಪ ಬಾಗೇವಾಡಿ

**ಮುಂದುವರೆದ ಮುಖ್ಯ ವಿಚಾರಣೆ. ಎ. ಪಿ. ಪಿ. ವಕೀಲರಿಂದ**

3. ಮೇಲೆ ನಮೂದಿಸಿದ ಕ್ರಮ ಸಂಖ್ಯೆಃ1 ರಿಂದ 4 ಗಳಲ್ಲಿ ತಲಾ 2 ರಂತೆ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು, ಅವುಗಳನ್ನು ಬಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ, ನಮ್ಮ ಸಹಿ ಇರುವ ಚೀಟಿಗಳನ್ನು ಅಂಟಿಸಿ, ಅರಗಿನಿಂದ ಸೀಲ್ ಮಾಡಲಾಯಿತು. ನಂತರ ಸ್ಥಳದಲ್ಲಿ ಬೆಳಿಗ್ಗೆ 05-46 ರಿಂದ 07-00 ಗಂಟೆಯ ವರೆಗೆ ಸ್ಥಳ ಪಂಚನಾಮೆಯನ್ನು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಮಾಡಿ, ಅಕ್ರಮ ಮದ್ಯವನ್ನು ಜಪ್ತುಪಡಿಸಿಕೂಳ್ಳಲಾಯಿತು.

4. ದಿಃ 04-08-2018 ರಂದು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿಟ್ಟ ಅಕ್ರಮ ಮದ್ಯವನ್ನು ಚಾಸಾ-1 ರವರ ಆದೇಶದಂತೆ ಧಾರವಾಡದ ಎಫ್.ಎಸ್.ಎಲ್ ಕಚೇರಿಗೆ ತೆಗದುಕೊಂಡ ಹೋಗಿ, ದಿಃ 07-08-2018 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡು ಬಂದು, ಚಾಸಾ-1 ರವರಿಗೆ ನೀಡಿರುತ್ತೇನೆ.

5. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 (ಬಿ ) ಎಂದು ಗುರುತಿಸಲಾಯಿತು.

ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ 750 ಎಂ.ಎಲ್ ಎರಡು ಗಾಜಿನ ಮತ್ತು 2 ಪ್ಲಾಸ್ಟಿಕ್ ಬಾಟಲಿಗಳು ಮತ್ತು 180 ಎಂ.ಎಲ್ ಎರಡು ಗಾಜಿನ ಬಾಟಲಿಗಳು, 500 ಎಂ.ಎಲ್ ನ ಎರಡು ಟಿನ್ ಗಳ ನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-1 ರಿಂದ 8 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಎಸ್.ಜೆ ವಕೀಲರಿಂದ</u>

6. ಆ ದಿನ ಆರೋಪಿಯನ್ನು ನಾವೆಲ್ಲಾರೂ ಸೇರಿ ನಿಲ್ಲಿಸಿರುತ್ತೇವೆ. ಅನಮೋಡ ತನಿಖಾ ಠಾಣೆಯ ಹತ್ತಿರ ಸಾಕಷ್ಟು ಅಂಗಡಿಗಳು ಇವೆ ಎಂದರೆ ಸರಿ. ಅಲ್ಲಿ ಸದರಿ ಸ್ಥಳೀಕರನ್ನು ಪಂಚನಾಮೆಗೆ ಸಹಕರಿಸಲು ಹೋಗಿ ಕೇಳಿದ್ದರು ಸಹಿತ ಅವರು ಒಪ್ಪಿಕೊಂಡಿರುವುದಿಲ್ಲ. ಈ ರೀತಿ ನಿಪಿ 1 ರಲ್ಲಿ ನಮೂದಿಸಿಲ್ಲ. ಕೇಸರಿ ಬಣ್ಣದ ಬ್ಯಾಗನ್ನು ಜಪ್ತು ಮಾಡಿಲ್ಲ. ಸದರಿ ಬ್ಯಾಗನ ವಿವರಗಳನ್ನು ನಿಪಿ 1 ರಲ್ಲಿ ನಮೂದಿಸಿಲ್ಲ. ಆರೋಪಿ ಹಿಂದಿನ ಬಾಲಿನಿಂದ ಓಡಿ ಹೋಗಲು ಪ್ರಯತ್ನ ಮಾಡಿರುತ್ತಾನೆ.

7. ಅನಮೋಡ ತನಿಖಾ ಠಾಣೆಯ ಹಿಂದೆ ಗುಡ್ಡ ಇದೆ ಎಂದರೆ ಸರಿಯಲ್ಲ. ಆರೋಪಿ ಓಡಿ ಹೋಗುವಾಗ ನಾನು ಮತ್ತು ಚಾಸಾ 2 ರವರು ಹಿಡಿಯಲು ಪ್ರಯತ್ನಿಸಿದ್ದೇವು. ಬ್ಯಾಗನ್ನು ಕಚೇರಿಯಲ್ಲಿ ಪರಿಶೀಲನೆ ಮಾಡಿರುತ್ತೇವೆ. ಅನಮೋಡ ತನಿಖಾ ಠಾಣೆಯ ಚೆಕ್ ಪೋಸ್ಟ್ ಬರಬೇಕಾದರೆ ಗೋವಾದ ಚೆಕ್ ಪೋಸ್ಟ್ ದಾಟಿ ಬರಬೇಕಾಗುತ್ತದೆ ಎಂದರೆ ಸರಿ. ಅಲ್ಲಿಯೂ ಸಹ ವಾಹನಗಳನ್ನು ಪರಿಶೀಲನೆ ಮಾಡಲಾಗುತ್ತದೆ ಎಂದರೆ ಸರಿ. ಬ್ಯಾಗ್ ನಲ್ಲಿ ಅಥವಾ ಆರೋಪಿಯ ವಾಹನದಲ್ಲಿ ಅಕ್ರಮ ಮದ್ಯೆ ಇತ್ತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ ಇದೆ/-

(ತೇಜಸ್ವಿನಿ ಸೊಗಲದ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.